ಇ) ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಖಾಸಗಿಯಾಗಿ ಬಡಾವಣೆ ನಿರ್ಮಿಸಿ ಅವ್ಯವಹಾರ ನಡೆಸಿರುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ 65 ರನ್ವಯ ನಡೆಸಿದ ವರದಿಯಿಂದ ಕಂಡು ಬಂದಿದ್ದು ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಈ) ಈ ಸಂಘವನ್ನು ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿಲ್ಲ. ಹಾಲಿ ಈ ಸಂಘದ ಬಗ್ಗೆ ಇರುವ ದೂರುಗಳ ಬಗ್ಗೆ ಪರಿವೀಕ್ಷಣೆ ನಡೆಸಿದ್ದು ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಮಾಪನ ಗೊಳಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ

4681 (5422) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರಾವರಿ ಇಲಾಖೆ ಪ್ರಾರಂಭವಾದ ದಿನಾಂಕ ಯಾವುದು;

ಆ) ನೀರಾವರಿ ಇಲಾಖೆ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿದ್ದ ಮುಖ್ಯ ಕಾರ್ಯ ನಿರ್ವಾಹಕ ಅಭಿಯಂತರರು ಹಾಗೂ ಇಲಾಖಾ ಸಿಬ್ಬಂದಿ ಎಷ್ಟು; (ಹುದ್ದೆಗೆ ಅನುಗುಣವಾಗಿ ತಿಳಿಸುವುದು)

ಇ) ಇಲಾಖೆ ಸೃಷ್ಟಿ ಆದಾಗ ಯಾವ ಯಾವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಣಯಿಸಲಾಯಿತು;

ಈ) ಇದರಲ್ಲಿ ಎಷ್ಟು ಸಂಪೂರ್ಣಗೊಂಡಿರುವುವು;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕರ್ನಾಟಕದಲ್ಲಿ ದಿನಾಂಕ : 20–10–1986ರಲ್ಲಿ ನೀರಾವರಿ ಇಲಾಖೆಯು ಲೋಕೋಪಯೋಗಿ ಇಲಾಖೆಯಿಂದ ಪ್ರತ್ಯೇಕಗೊಂಡಿತು. ದಿನಾಂಕ: 1–7–91 ರಂದು ವಿದ್ಯುಕ್ತವಾಗಿ ನೀರಾವರಿ ಇಲಾಖೆ ಎಂದು ಜಾರಿಗೊಂಡಿದೆ.

ಆ) ನೀರಾವರಿ ಇಲಾಖೆ ಜಾರಿಗೊಂಡ ನಂತರ 1986 ರಲ್ಲಿ ದರ್ಜೆ ಹಾಗೂ ಆಯ್ಕೆ ನಿಯಮಗಳಂತೆ (ಸಿ ಮತ್ತು ಆರ್ ರೂಲ್ಸ್) ಇಲಾಖೆಯಲ್ಲಿನ ಎ, ಬಿ, ಸಿ ಮತ್ತು ಡಿ ವರ್ಗಗಳ ಅಧಿಕಾರಿ/ನೌಕರರ ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಇ) ಈ) 1986ರ ಪೂರ್ವದಲ್ಲಿ ಜಾರಿಯಲ್ಲಿದ್ದ ನೀರಾವರಿ ಯೋಜನೆಗಳೊಂದಿಗೆ ನೂತನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಯೋಜನೆಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಅನುಬಂಧ – 1

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಒಟ್ಟು ಹುದ್ದೆಗಳು
	ಗ್ರೂಪ್ ಎ	
1.	ಪ್ರಧಾನ ಇಂಜಿನಿಯರ್	9
2.	ಮುಖ್ಯ ಇಂಜಿನಿಯರ್	15
3.	ಅಧೀಕ್ಷಕ ಇಂಜಿನಿಯರ್	57

1	2	3
4.	ಕಾರ್ಯಪಾಲಕ ಇಂಜಿನಿಯರ್	211
5.	ಜಂಟಿ ನಿರ್ದೇಶಕರು, ಸಾಂಖ್ಯಿಕ	1
6.	ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿಭಾಗ–1	797
7.	ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿಭಾಗ–2	170
8.	ಉಪನಿರ್ದೇಶಕರು, ಸಾಂಖ್ಯಿಕ	2
9.	ಅರ್ಥಶಾಸ್ತ್ರಜ್ಞರು	2
10.	ಹಿರಿಯ ಭೂವಿಜ್ಞಾನಿ	5
11.	ಕೃಷಿ ವಿಜ್ಞಾನಿ	3
12.	ಲೆಕ್ಕಾಧಿಕಾರಿ	2
	ಗ್ರೂಪ್ – ಬಿ	
13.	ಭೂ ವಿಜ್ಞಾನಿ	3
14.	ಕೃಷಿ ಅಧಿಕಾರಿ	2
15.	ಸಹಾಯಕ ಇಂಜಿನಿಯರ್	2699
16.	ಸಹಾಯಕ ಭೂ ವಿಜ್ಞಾನಿ	7
17.	ನಿಬಂಧಕರು	33
	ಗ್ರೂಪ್ – ಸಿ	
18.	ಅಧೀಕ್ಷರು	160
19.	ಲೆಕ್ಕ ಅಧೀಕ್ಷರು	126
20.	ಉಗ್ರಾಣ ಅಧಿಕ್ಷಕರು	3
21.	ಕಿರಿಯ ಇಂಜಿನಿಯರ್	1602
22.	ಸಹಾಯಕ ರಸಾಯನಿಕ ಇಂಜಿನಿಯರ್	6
23.	ಸಹಾಯಕ ಸಾಂಖ್ಯಿಕ ಅಧಿಕಾರಿ	14
24.	ಎಲೆಕ್ಟ್ರಿಕಲ್ ಆಪರೇಟರ್	27
25.	ಹೆವಿ ಅರ್ಥ್ ಮೂವಿಂಗ್ ಆಪರೇಟರ್	6
26.	ಮೆಕ್ಯಾನಿಕಲ್ ಫೋರ್‌ಮೆನ್	1
27.	ಸಾಂಖ್ಯಿಕ ನಿರೀಕ್ಷಕರು	26
28.	ಛಾಯಾಗ್ರಾಹಕರು	6
29.	ಆಕೃತಿ ರಚನಾಕಾರರು	482

1	2	3
30.	ರಾಸಾಯನಿಕ ತಜ್ಞರು	2
31.	ಪ್ರಥಮ ದರ್ಜೆ ಸಹಾಯಕರು	843
32.	ಪ್ರಥಮ ದರ್ಜೆ ಲೆಕ್ಕ ಸಹಾಯಕರು	327
33.	ಪ್ರಥಮ ದರ್ಜೆ ಉಗ್ರಾಣಪಾಲಕರು	125
34.	ಶೀಘ್ರಲಿಪಿಗಾರರು	136
35.	ಸಿಸ್ಮೋಲಾಜಿಕಲ್ ಅಸಿಸ್ಟೆಂಟ್	2
36.	ರೆವಿನ್ಯೂ ನಿರೀಕ್ಷಕರು	32
37.	ಪ್ರಥಮ ದರ್ಜೆ ಭೂಮಾಪಕರು	151
38.	ಮಾದರಿ ತಯಾರಿಸುವ ಕಲೆಗಾರರು	1
39.	ಅನುರೇಖಕರು	619
40.	ಫೋರ್‌ಮೆನ್	6
41.	ದ್ವಿತೀಯ ದರ್ಜೆ ಸಹಾಯಕರು	1541
42.	ದ್ವಿತೀಯ ದರ್ಜೆ ಲೆಕ್ಕ ಸಹಾಯಕರು	310
43.	ದ್ವಿತೀಯ ದರ್ಜೆ ಉಗ್ರಾಣ ಸಹಾಯಕರು	112
44.	ಬೆರಳಚ್ಚುಗಾರರು	803
45.	ಕಂಪ್ಯೂಟರ್	3
46.	ನೀಲಿ ನಕ್ಷೆಗಾರರು	71
47.	ದ್ವಿತೀಯ ದರ್ಜೆ ಭೂ ಮಾಪಕರು	37
48.	ಸಹಾಯಕ ಛಾಯಾಗ್ರಾಹಕರು	1
49.	ಎಲೆಕ್ಟ್ರಿಕಲ್ ಮೆಕ್ಯಾನಿಕ್	11
50.	ಚಾಲಕರು	232
	ಗ್ರೂಪ್ ಡಿ	
51.	ಅನುಚರರು	86
52.	ಅಡಿಗೆಯವರು : ಮೇಟಿ	6
53.	ಫಿಟ್ಟರ್ : ಟರ್ನರ್ : ವೆಲ್ಡರ್	4
54.	ಕಮ್ಮಾರ	2
55.	ಮರಗೆಲಸಗಾರ	2
56.	ಗಾರೆ ಕೆಲಸಗಾರ	1

1	2	3
57.	ಜವಾನ : ಕಾವಲುಗಾರ	1586
58.	ಇತರೆ	53
	ಒಟ್ಟು	13585

ಅನುಬಂಧ – 2

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

ಕ್ರಮ ಸಂಖ್ಯೆ	ಯೋಜನೆ	ಪ್ರಾರಂಭವಾದ ವರ್ಷ
1.	ಕೃಷ್ಣ ಕೊಳ್ಳ	
ಅ.	ಪೂರ್ಣಗೊಂಡ ಯೋಜನೆಗಳು	
1.	ಘಟಪ್ರಭಾ – 1 ಮತ್ತು 2	1948 / 56
2.	ಭದ್ರಾ	1947
3.	ಅಂಬ್ಲಿಗೋಳ	1954
4.	ಚಂದ್ರಂಪಳ್ಳಿ	1966
5.	ಧರ್ಮ	1957
6.	ಗಾಯತ್ರಿ	1952
7.	ಹಗರಿಬೊಮ್ಮನಹಳ್ಳಿ	1960
8.	ಹತ್ತಿಕುಣಿ	1960
9.	ಜಂಬದಹಳ್ಳ	1958
10.	ಕನಕನಾಲಾ	1957
11.	ನಾರೀಹಳ್ಳ	1965
12.	ರಾಜೋಲಿಬಂಡಾ	1947
13.	ಸೌದಾಗರ	1975
14.	ರಾಣಿಕೆರೆ ಪೂರಕ ನಾಲೆ	1993
15.	ಮುಲ್ಲಾಮಾರಿ ಮೇಲ್ದಂಡೆ	1976
ಆ	ಪ್ರಗತಿಯಲ್ಲಿರುವ ಯೋಜನೆಗಳು	
1.	ಬೆಣ್ಣೆತೋರಾ	1973
2.	ಭೀಮಾ ಏತ	1993
3.	ದೂಧ್ ಗಂಗಾ	1992
4.	ಘಟಪ್ರಭಾ–3	1972

1	2	3
5.	ಹಿಪ್ಪರಗಿ	1973
6.	ಮಲಪ್ರಭಾ	1960
7.	ತುಂಗಭದ್ರಾ ಎಡದಂಡೆ ನಾಲೆ	1945
8.	ತುಂಗಭದ್ರಾ ಬಲದಂಡೆ ನಾಲೆ	1959
9.	ಕೃ.ಮೇ.ಯೋ – 1 ಮತ್ತು 2	1964/65
10.	ತುಂಗಾ ಮೇಲ್ದಂಡೆ	1991
11.	ಅಮರ್ಜಾ	1975
12.	ಬಸಾಪುರ ಏತ	1993
13.	ಗಂಡೋರಿನಾಲಾ	1993
14.	ಹಿರೇಹಳ್ಳ	1977
15.	ಹೊಡೀರಾಯನಹಳ್ಳ	1987
16.	ಮುಲ್ಲಾಮಾರಿ ಕೆಳದಂಡೆ	1975
17.	ಮಸ್ಕಿನಾಲಾ	1976
18.	ಇಟಗಿ–ಸಾಸಲವಾಡ ಏತ	1994
19.	ಮಾರ್ಕಂಡೇಯ	1998
20.	ರಾಮತಾಳ ಏತ (ಮರೋಳ್)	2003
21.	ಸಿಂಗಟಲೂರು	1993
22.	ಹರಿನಾಲಾ	1998
23.	ಭೀಮಾ ಹರಿ	2002
2.	ಕಾವೇರಿ ಕೊಳ್ಳ	
ಅ.	ಪೂರ್ಣಗೊಂಡ ಯೋಜನೆಗಳು	
1.	ನುಗು	1946
2.	ಚಿಕ್ಕಹೊಳೆ	1958
3.	ತಾರಕ	1969
4.	ಗುಂಡಾಲ್	1970
5.	ಹೆಬ್ಬಳ್ಳ	1957
6.	ಮಂಗಳಾ	1961
7.	ನಲ್ಲೂರು ಅಮಾನಿಕೆರೆ	1975

1	2	3
8.	ಸುವರ್ಣಾವತಿ	1966
ಅ.	**ಪ್ರಗತಿಯಲ್ಲಿರುವ ಯೋಜನೆಗಳು**	
1.	ಡಿ.ಡಿ. ಅರಸ್ ಕಾಲುವೆ	1979
2.	ಹಾರಂಗಿ	1964
3.	ಹೇಮಾವತಿ	1968
4.	ಕಬಿನಿ	1959
5.	ಕೆ.ಆರ್. ಎಸ್. ಆಧುನೀಕರಣ	1979
6.	ಯಗಚಿ	1983
7.	ಅರ್ಕಾವತಿ	1984
8.	ಚಿಕ್ಕಹೊಳೆ ಏತ	1978
9.	ಹುಚ್ಚನಕೊಪ್ಪಲು ಏತ	1991
10.	ಇಗ್ಗಲೂರು	1977
11.	ಕಾಮಸಮುದ್ರ ಏತ	1985
12.	ಮಂಚನಬೆಲೆ	1969
13.	ಉಡುತೊರೆಹಳ್ಳ	1978
14.	ವಾಟೆಹೊಳೆ	1977
15.	ನಂಜಾಪುರ ಏತ	1998
16.	ಶಿಂಷಾ ಆಧುನೀಕರಣ	2001
17.	ಬದನವಾಳೂ ಏತ	2003
18.	ಬನಹಳ್ಳಿ ಏತ	2003
19.	ಕಾಚೇನಹಳ್ಳಿ ಏತ	1991
3.	ಗೋದಾವರಿ ಕೊಳ್ಳ	
ಅ.	**ಪ್ರಗತಿಯಲ್ಲಿರುವ ಯೋಜನೆಗಳು**	
1.	ಕಾರಂಜಾ	1970
2.	ಚುಲ್ಕಿನಾಲಾ	1976
4.	ಇತರೆ ಕೊಳ್ಳಗಳು	
ಅ.	ಪೂರ್ಣಗೊಂಡ ಯೋಜನೆಗಳು	
1.	ತೀತಾ (ಉತ್ತರ ಪೆನ್ನಾರ್)	1971
ಅ.	**ಪ್ರಗತಿಯಲ್ಲಿರುವ ಯೋಜನೆಗಳು**	
1.	ವಾರಾಹಿ (ಪಶ್ಚಿಮವಾಹಿನಿ)	1980

1	2	3
2.	ಮಹಾದಾಯಿ ತಿರುವು	1992
3.	ಕಳಸನಾಲಾ	2000
4.	ಬಂಡೂರಾನಾಲಾ	2000

ರಾಜ್ಯದಲ್ಲಿರುವ ಮಧ್ಯಮ ನೀರಾವರಿ ಯೋಜನೆಗಳು

4682 (5424) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮಧ್ಯಮ ನೀರಾವರಿ ಯೋಜನೆಗಳೆಷ್ಟು; ಅವು ಯಾವುವು ಹಾಗೂ ಅವುಗಳ ನೀರಾವರಿ ಸಾಮರ್ಥ್ಯ ಎಷ್ಟು;

ಆ) ಸದರಿ ಮಧ್ಯಮ ನೀರಾವರಿ ಯೋಜನೆಗಳಿಗೆ ತಗಲಿದ ವೆಚ್ಚ ಎಷ್ಟು; (ಯೋಜನಾವಾರು ವಿವರ ಒದಗಿಸುವುದು)

ಇ) ಇವುಗಳಲ್ಲಿ ಎಷ್ಟು ಪೂರ್ಣಗೊಂಡಿದೆ ಹಾಗೂ ಎಷ್ಟು ಅಪೂರ್ಣಗೊಂಡಿದೆ; (ಇದಕ್ಕೆ ಸ-. ಕಾರಣಗಳೇನು)

ಈ) ಸದರಿ ಯೋಜನೆಗಳಿಗೆ ಮೂಲ ಅಂದಾಜು ವೆಚ್ಚ ಎಷ್ಟು ಇತ್ತು (ಯೋಜನೆಗಳಿಗೆ ಅನುಗುಣವಾಗಿ) ಹಾಗೂ ಇವತ್ತಿನ ಮಟ್ಟಿಗೆ ಪರಿಷ್ಕೃತ ಅಂದಾಜು ವೆಚ್ಚ ಎಷ್ಟಾಗಿದೆ; (ದಿನಾಂಕವಾರು ತಿಳಿಸುವುದು)?

ಶ್ರೀಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 48 ಮಧ್ಯಮ ನೀರಾವರಿ ಯೋಜನೆಗಳಿವೆ ಯೋಜನೆಗಳ ಹೆಸರು ಮತ್ತು ನೀರಾವರಿ ಸಾಮರ್ಥ್ಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ನೀರಾವರಿ ಯೋಜನೆಗಳಿಗೆ ತಗುಲಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪೂರ್ಣಗೊಂಡಿರುವ ಮಧ್ಯಮ ನೀರಾವರಿ ಯೋಜನೆಗಳು : 29. ಪ್ರಗತಿಯಲ್ಲಿರುವ ಮಧ್ಯಮ ನೀರಾವರಿ ಯೋಜನೆಗಳು : 19. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಮಧ್ಯಮ ನೀರಾವರಿ ಯೋಜನೆಗಳ ಮೂಲ ಅಂದಾಜು ವೆಚ್ಚ ಇತ್ತೀಚಿನ ಪರಿಷ್ಕೃತ ಅಂದಾಜು ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ರಾಜ್ಯದ ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

1	2	3	4	5	6
ಕ್ರ. ಸಂ.	ಯೋಜನೆ	3.03ರಂತೆ ನೀರಾವರಿ ಸಾಮರ್ಥ್ಯ (ಹೆಕ್ಟೇರ್‌ಗಳಲ್ಲಿ)	ಮೂಲ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಪರಿಷ್ಕೃತ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	03/2003ರ ಅಂತ್ಯಕ್ಕೆ ತಗಲಿರುವ ವೆಚ್ಚ (ರೂ. ಲಕ್ಷಗಳಲ್ಲಿ)
ಅ)ಪೂರ್ಣಗೊಂಡಿರುವ ಯೋಜನೆಗಳು					
1.	ಅಂಬ್ಲಿಗೋಳ	2955.00	–	116.00	116.00
2.	ಅಂಜನಾಪುರ	6773.00	–	21.00	21.00